# ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕುಷ್ಟಗಿ.

**ದಿನಾಂಕ ಃ 01 ನೇ ಏಪ್ರಿಲ್ - 2019**

**- ಉಪಸ್ಥಿತರು -**

**ಶ್ರೀ. ಬಿ. ಕೇಶವಮೂರ್ತಿ,** ಬಿ.ಎ., ಎಲ್.ಎಲ್.ಬಿ.,
**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಕುಷ್ಟಗಿ.**

**ಸಿ.ಸಿ. ಸಂಖ್ಯೆಃ 17/2014**

**ಫಿರ್ಯಾದುದಾರರು** ಃ ಸರ್ಕಾರದ ಪರ ಕುಷ್ಟಗಿ ಠಾಣಾ ಪೊಲೀಸರು,
(ಪ್ರತಿನಿಧಿಸಿದವರು ಸಹಾಯಕ ಸರ್ಕಾರಿ ಅಭಿಯೋಜಕರು)

**- ವಿರುದ್ಧ -**

**ಆರೋಪಿ** ಃ ಮುರಾರಿ (ಎಂ.ಜಿ. ಪೂಜಾರ) ತಂದೆ ಗವಿಸಿದ್ದಪ್ಪ ಪೂಜಾರ, ವಃ 49 ವರ್ಷ, ಉಃ ಕುರಿ ಕಾಯುವ ಕೆಲಸ, ಸಾಃ ನಣಾದಗಿ, ತಾಃ ಚಿಕ್ಕೊಡಿ, ಜಿಃ ಬೆಳಗಾವಿ.

(ಆರೋಪಿ ಪರ ಶ್ರೀ.ಎ.ಹೆಚ್.ಪಿ.,ವಕೀಲರು)

| | | |
|---|---|---|
| ಘಟನೆ ನಡೆದ ದಿನಾಂಕ | ಃ | 10-08-2013 |
| ಘಟನೆ ವರದಿ ಮಾಡಿದ ದಿನಾಂಕ | ಃ | 10-08-2013 |
| ಆರೋಪಿಯ ಬಂಧನದ ವಿವರ | ಃ | - |
| ಅ. ಬಂಧನದ ದಿನಾಂಕ | ಃ | - |
| ಆ. ಜಾಮೀನಿನ ಮೇಲೆ ಬಿಡುಗಡೆಯಾದ ದಿನಾಂಕ | ಃ | 12-08-2013 |

| | | |
|---|---|---|
| ಫಿರ್ಯಾದುದಾರನ ಹೆಸರು | : | ವೀರೇಶ ಬಿರಾದಾರ. |
| ವಿಚಾರಣೆ ಪ್ರಾರಂಭವಾದ ದಿನಾಂಕ | : | 13-11-2017 |
| ವಿಚಾರಣೆ ಮುಕ್ತಾಯವಾದ ದಿನಾಂಕ | : | 13-11-2018 |
| ಫಿರ್ಯಾದು ಸಲ್ಲಿಸಿದ ಅಪರಾಧಗಳ ಕಲಂಗಳು | : | ಜೀತ ಪದ್ಧತಿ ನಿರ್ಮೂಲನಾ ಕಾಯ್ದೆ 1976 ರ ಕಲಂ 16. |
| ನ್ಯಾಯಾಧೀಶರ ತೀರ್ಪಿನ ಅಭಿಪ್ರಾಯ | : | ಅಂತಿಮ ಆದೇಶದಂತೆ. |

**(ಬಿ.ಕೇಶವಮೂರ್ತಿ)**
ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಕುಷ್ಟಗಿ.

## – : ತೀರ್ಪು : –

ಕುಷ್ಟಗಿ ಠಾಣಾ ಆರಕ್ಷಕ ಉಪ ನಿರೀಕ್ಷಕರು ಆರೋಪಿತನ ವಿರುದ್ಧ ಜೀತ ಪದ್ದತಿ ನಿರ್ಮೂಲನಾ ಕಾಯ್ದೆ 1976 ರ ಕಲಂ 16 ರ ಆರೋಪಗಳಿಗಾಗಿ ಅಪಾದಿಸಿ ದೋಷಾರೋಪಣ ಪತ್ರ ಸಲ್ಲಿಸಿರುತ್ತಾರೆ.

2. ಈ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆ :

ಕುಷ್ಟಗಿ ಪೋಲಿಸ್ ಠಾಣಾ ಸರಹದ್ದಿನಲ್ಲಿ ಬರುವ ಮದಲಗಟ್ಟಿ ಗ್ರಾಮದ ಕೆರೆಯ ಹತ್ತಿರ ಆರೋಪಿತನು ತನ್ನ ಸುಮಾರು 50 ಕುರಿಗಳನ್ನು ತಾನು ಹಾಗೂ ಇತರ ಸಂಬಂಧಿಕರು ಕೂಡಿ ಸಾಕಾಣಿಕೆ ಮಾಡಿದ್ದು, ಸದರಿ ಕುರಿಗಳನ್ನು ಚಿಕ್ಕೋಡಿಯಿಂದ ಮೇಯಿಸಲಿಕ್ಕೆ ತಿರುಗಾಡುತ್ತಾ ಬರುತ್ತಿದ್ದು, ಕುರಿಗಳನ್ನು ಕಾಯ್ದುಕೊಂಡು ಇರಲು ಇಬ್ಬರು

ಮಕ್ಕಳಾದ ಸಾಕ್ಷಿ ನಂ. 4 ಸಂತೋಷ ಲಮಾಣಿ ಮತ್ತು ಸಾಕ್ಷಿ ನಂ. 5 ಕಿರಣ ರವರನ್ನು ಜೀತ ಪದ್ದತಿಗೆ ಅನುಗುಣವಾಗಿ ವರ್ಷಕ್ಕೆ ಕ್ರಮವಾಗಿ 9 ಮತ್ತು 5 ಕುರಿಗಳನ್ನು ಕೊಟ್ಟು ಜೀತಕ್ಕೆ ಇಟ್ಟುಕೊಂಡು ಅವರಿಗೆ ಸರಿಯಾಗಿ ಊಟ ವ್ಯವಸ್ಥೆ ಮಾಡದೇ ಬೆಳಿಗ್ಗೆ 04-00 ಗಂಟೆಯಿಂದ ಸಂಜೆ 06-00 ಗಂಟೆಯವರೆಗೆ ಅವರಿಗೆ ಶಾಲೆಗೆ ಕಳುಹಿಸದೇ, ರಜೆ ನೀಡದೇ ಅಮಾನುಷವಾಗಿ ದುಡಿಸಿಕೊಂಡಿದ್ದು, ತನಿಖೆಯಿಂದ ದೃಡಪಟ್ಟಿರುವುದಾಗಿ ಆರೋಪಿತನ ವಿರುದ್ದ ಮೇಲ್ಕಂಡ ಕಲಂಗಳ ಅನ್ವಯ ದೋಷಾರೋಪಣಪಟ್ಟಿ ಸಲ್ಲಿಸಲಾಗಿದೆ.

3. ದೋಷಾರೋಪಣಾ ಪತ್ರ ಸ್ವೀಕರಿಸಿದ ನಂತರ ಈ ನ್ಯಾಯಾಲಯವು ಆರೋಪಿತನ ವಿರುದ್ದ ಸಂಜ್ಞೆಯುಗಳನ್ನು ತೆಗೆದುಕೊಂಡಿರುತ್ತದೆ. ಆರೋಪಿತನು ವಕೀಲರ ಮುಖಾಂತರ ಜಾಮೀನು ಅರ್ಜಿ ಸಲ್ಲಿಸಿ ನ್ಯಾಯಾಲಯದಿಂದ ಜಾಮೀನು ಪಡೆದುಕೊಂಡಿರುತ್ತಾರೆ. ದಂಡ ಪ್ರಕ್ರಿಯಾ ಸಂಹಿತೆ.207 ರಡಿಯಲ್ಲಿ ತಿಳಿಸಿರುವಂತೆ ಅಭಿಯೋಜನಾ ಕೇಸಿನ ದಾಖಲೆಗಳ ನಕಲುಗಳನ್ನು ಆರೋಪಿತನಿಗೆ ನೀಡಿ, ಅವರ ವಿರುದ್ದದ ಆರೋಪಣೆಯನ್ನು ತಯಾರಿಸಿ, ಓದಿ ವಿವರಿಸಲಾಗಿ ಆರೋಪಿತನು ತಮ್ಮ ವಿರುದ್ದದ ಆರೋಪಗಳನ್ನು ಅಲ್ಲಗೆಳೆದಿದ್ದು, ಆರೋಪಗಳ ವಿಚಾರಣೆಯಾಗಲೆಂದು ಕೇಳಿಕೊಂಡ ಮೇರೆಗೆ ಅಧಿವಿಚಾರಣೆ ಮಾಡಲಾಯಿತು.

4. ತಮ್ಮ ಪ್ರಕರಣವನ್ನು ಬೆಂಬಲಿಸಿ ಅಭಿಯೋಜನೆಯವರು 16 ಸಾಕ್ಷಿದಾರರನ್ನು ಪ್ರಾ.ಸಾ - 1 ರಿಂದ ಪ್ರಾ.ಸಾ - 16 ರವರನ್ನು ವಿಚಾರಣೆ ಮಾಡಿ, ಅವರ ಮೂಲಕ ನಿಪಿ - 1 ರಿಂದ ನಿಪಿ - 12 ವರೆಗಿನ ದಾಖಲಾತಿಗಳನ್ನು ತಮ್ಮ ಸಾಕ್ಷ್ಯದಲ್ಲಿ

ಗುರುತಿಸಿಕೊಂಡಿರುತ್ತಾರೆ. ದಂಡ ಪ್ರಕ್ರಿಯಾ ಸಂಹಿತೆ ಕಲಂ. 313 ರಡಿಯಲ್ಲಿ ಆರೋಪಿಯ ಹೇಳಿಕೆಯನ್ನು ದಾಖಲಿಸಿಕೊಳ್ಳಲಾಗಿದೆ.

5. ಸರ್ಕಾರದ ಪರವಾಗಿ ಸಹಾಯಕ ಸರ್ಕಾರಿ ಅಭಿಯೋಜಕರ ಹಾಗೂ ಆರೋಪಿ ಪರವಾಗಿ ಶ್ರೀ.ಎ.ಹೆಚ್.ಪಿ., ವಕೀಲರ ವಾದ ಕೇಳಿ ಕಡತದ ಪರಿಶೀಲನೆ ಮಾಡಲಾಗಿ ಈ ಕೆಳಕಂಡ ಅಂಶಗಳು ನನ್ನ ನಿರ್ಣಯಕ್ಕೆ ಬಂದಿರುತ್ತವೆ.

## ಅಂಶಗಳು

**1.** ಆರೋಪಿತನು ತನ್ನ ಸುಮಾರು 50 - 30 ಕುರಿಗಳನ್ನು ಸಾಕಾಣಿಕೆ ಮಾಡಿದ್ದು, ಅವುಗಳನ್ನು ಚಿಕ್ಕೋಡಿಯಿಂದ ಮೇಯಿಸಲಿಕ್ಕೆ ಅಂತಾ ತಿರುಗಾಡುತ್ತಾ ಬರುತ್ತಿದ್ದು, ಆರೋಪಿಯ ಕುರಿಗಳನ್ನು ಕಾಯಲು ಅಲ್ಪವಯಿ ಮಕ್ಕಳಾದ ಸಾಕ್ಷಿ ನಂ. 4 ಸಂತೋಷ ಲಮಾಣಿ ವಃ 12 ಹಾಗೂ ಸಾಕ್ಷಿ ನಂ. 5 ಕಿರಣ ವಃ 10 ವರ್ಷ ಇವರನ್ನು ಜೀತ ಪದ್ದತಿಗೆ ಕ್ರಮವಾಗಿ 9 ಮತ್ತು 5 ಕುರಿಗಳನ್ನು ಕೊಟ್ಟು ಜೀತಕ್ಕೆ ಇಟ್ಟುಕೊಂಡು ಅವರಿಗೆ ಸರಿಯಾಗಿ ಊಟ ವ್ಯವಸ್ಥೆ ಮಾಡದೇ ಬೆಳಿಗ್ಗೆ 04-00 ಗಂಟೆಯಿಂದ ಸಂಜೆ 06-00 ಗಂಟೆಯವರೆಗೆ ಅವರಿಗೆ ಶಾಲೆಗೆ ಕಳುಹಿಸದೇ ರಜೆ ನೀಡದೇ ಅಮಾನುಷವಾಗಿ ದುಡಿಸಿಕೊಂಡಿದ್ದು, ಆ ಮೂಲಕ ಕಲಂ 16 ಜೀತ ಪದ್ದತಿ ನಿರ್ಮೂಲನಾ ಕಾಯ್ದೆ 1976 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆ ಎಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಭೀತು ಪಡಿಸುತ್ತಾರೆಯೇ **?**

2. ಹಾಗಿದ್ದರೆ ಯಾವ ಆದೇಶ **?**

6. ಮೇಲಿನ ಅಂಶಗಳಿಗೆ ನನ್ನ ಉತ್ತರವು ಮುಂದಿನ ಕಾರಣಗಳಿಗಾಗಿ ಈ ಕೆಳಕಂಡಂತಿದೆ.

ಅಂಶ.1 : ನಕಾರಾತ್ಮಕವಾಗಿ.
ಅಂಶ.2 : ಅಂತಿಮ ಆದೇಶದಂತೆ.

## - ಕಾ ರ ಣ ಗ ಳು -

7. ಅಂಶ 1 ರಿಂದ 3 :- ಅಭಿಯೋಜನೆಯವರು ಆರೋಪಿತನ ಮೇಲಿನ ಆರೋಪವನ್ನು ಸಾಭೀತುಪಡಿಸಲು ಪ್ರಾ.ಸಾ. 1 ರಿಂದ 16 ರವರನ್ನು ವಿಚಾರಣೆ ಮಾಡಿ, ಅವರ ಮೂಲಕ ನಿಪಿ - 1 ರಿಂದ 12 ರ ದಾಖಲಾತಿಗಳನ್ನು ತಮ್ಮ ಸಾಕ್ಷ್ಯದಲ್ಲಿ ಗುರುತಿಸಿಕೊಂಡಿರುತ್ತಾರೆ.

8. ಪ್ರಾ.ಸಾ - 1 ಮರಿಸ್ವಾಮಿ, ಈ ಪ್ರಕರಣದ ಸ್ಥಳ ಪಂಚನಾಮೆಯ ಸಾಕ್ಷಿದಾರರು, ತಮ್ಮ ಸಾಕ್ಷ್ಯದಲ್ಲಿ ನಿಪಿ - 1 ರ ದಾಖಲಾತಿಗೆ ಪೋಲಿಸರು ಈಗ್ಗೆ 03 ವರ್ಷಗಳ ಹಿಂದೆ ಕುಷ್ಟಗಿಯಲ್ಲಿ ಸಹಿ ಮಾಡಿಸಿಕೊಂಡಿರುವುದಾಗಿ, ಯಾವ ವಿಚಾರಕ್ಕೆ ಸಹಿ ಪಡೆದರು ಗೊತ್ತಿಲ್ಲವೆಂದು, ಪೋಲಿಸರು ಸಹಿ ಮಾಡುವಂತೆ ತಿಳಿಸಿದ್ದರಿಂದ ಸಹಿ ಮಾಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಸದರಿ ಸಾಕ್ಷಿದಾರರು ನಿಪಿ - 1 ಸ್ಥಳ ಪಂಚನಾಮೆಯ ಸಂಬಂಧ ಪ್ರತಿಕೂಲ ಸಾಕ್ಷಿ ನುಡಿದ ಕಾರಣ ಮಾನ್ಯ ಸ.ಸ.ಅ ರವರು ಇವರನ್ನು ಪಾಟೀಸವಾಲಿಗೆ ಒಳಪಡಿಸಿದ್ದು, ಪಾಟೀಸವಾಲಿನಲ್ಲಿಯೂ ಸಹ ಅಭಿಯೋಜನೆಯ ಪ್ರಕರಣಕ್ಕೆ ಪೂರಕವಾಗಿ ಸಾಕ್ಷಿ ನುಡಿದಿರುವುದಿಲ್ಲ.

9. ಪ್ರಾ.ಸಾ - 2 ಹನಮಗೌಡ, ಈ ಪ್ರಕರಣದ ಮತ್ತೊಬ್ಬ ಸ್ಥಳ ಪಂಚನಾಮೆಯ ಸಾಕ್ಷಿದಾರರು, ತಮ್ಮ ಸಾಕ್ಷ್ಯದಲ್ಲಿ ನಿಪಿ - 1 ರ ದಾಖಲಾತಿಗೆ ಪೋಲಿಸರು ಈಗ್ಗೆ 03

ವರ್ಷಗಳ ಹಿಂದೆ ತಮ್ಮ ಗ್ರಾಮದಲ್ಲಿ ಸಹಿ ಮಾಡಿಸಿಕೊಂಡಿರುವುದಾಗಿ, ಯಾವ ವಿಚಾರಕ್ಕೆ ಸಹಿ ಪಡೆದರು ಗೊತ್ತಿಲ್ಲವೆಂದು, ಪೋಲಿಸರು ಸಹಿ ಮಾಡುವಂತೆ ತಿಳಿಸಿದ್ದರಿಂದ ಸಹಿ ಮಾಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಸದರಿ ಸಾಕ್ಷಿದಾರರು ನಿಪಿ - 1 ಸ್ಥಳ ಪಂಚನಾಮೆಯ ಸಂಬಂಧ ಪ್ರತಿಕೂಲ ಸಾಕ್ಷಿ ನುಡಿದ ಕಾರಣ ಮಾನ್ಯ ಸ.ಸ.ಅ ರವರು ಇವರನ್ನು ಪಾಟೀಸವಾಲಿಗೆ ಒಳಪಡಿಸಿದ್ದು, ಪಾಟೀಸವಾಲಿನಲ್ಲಿಯೂ ಸಹ ಅಭಿಯೋಜನೆಯ ಪ್ರಕರಣಕ್ಕೆ ಪೂರಕವಾಗಿ ಸಾಕ್ಷಿ ನುಡಿದಿರುವುದಿಲ್ಲ.

10. ಪ್ರಾ.ಸಾ - 3 ಮತ್ತು 4 ಈ ಪ್ರಕರಣದ ಸಾಕ್ಷಿದಾರರುಗಳು, ತಮ್ಮ ಸಾಕ್ಷ್ಯದಲ್ಲಿ, ತಮಗೆ ಈ ಪ್ರಕರಣದ ಯಾವುದೇ ವಿಚಾರಗಳು ಗೊತ್ತಿರುವುದಿಲ್ಲವೆಂದು, ಆರೋಪಿಯನ್ನು ಇದೇ ಮೊದಲ ಬಾರಿಗೆ ನೊಡುತ್ತಿರುವುದಾಗಿ, ಆರೋಪಿ ಇಬ್ಬರು ಬಾಲಕರನ್ನು ಜೀತಕ್ಕೆ ಇಟ್ಟುಕೊಂಡಿದ್ದ ವಿಚಾರ ತಮಗೆ ಗೊತ್ತಿರುವುದಿಲ್ಲ ಮತ್ತು ಪೋಲಿಸರಿಗೆ ಈ ಬಗ್ಗೆ ತಾವು ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಸದರಿ ಸಾಕ್ಷಿದಾರರುಗಳು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷಿ ನುಡಿದ ಕಾರಣ ಮಾನ್ಯ ಸ.ಸ.ಅ ರವರು ಇವರುಗಳನ್ನು ಪಾಟೀಸವಾಲಿಗೆ ಒಳಪಡಿಸಿದ್ದು, ಪಾಟೀಸವಾಲಿನಲ್ಲಿಯೂ ಸಹ ಅಭಿಯೋಜನೆಯ ಪ್ರಕರಣಕ್ಕೆ ಪೂರಕವಾಗಿ ಸಾಕ್ಷಿ ನುಡಿದಿರುವುದಿಲ್ಲ. ಇವರುಗಳು ಪೋಲಿಸರ ಮುಂದೆ ನೀಡಿದ್ದರೆಂದ ಹೇಳಿಕೆಗಳನ್ನು ನಿಪಿ - 2 ಮತ್ತು 3 ಎಂದು ಗುರುತಿಸಲಾಗಿದೆ.

11. ಪ್ರಾ.ಸಾ - 5 ಲಕ್ಷ್ಮವ್ವ, ಈ ಪ್ರಕರಣದ ಸಾಕ್ಷಿದಾರರು, ತಮ್ಮ ಸಾಕ್ಷ್ಯದಲ್ಲಿ ಚಾಸಾ-6 ಮತ್ತು 7 ತನ್ನ ಮಕ್ಕಳಾಗಿದ್ದು, ಅವರು ಸುಮಾರು 6 ವರ್ಷಗಳ ಹಿಂದೆ ಶಾಲೆ ಬಿಟ್ಟಿರುವುದಾಗಿ, ತನ್ನ ಮಕ್ಕಳು ಶಾಲೆ ಬಿಟ್ಟು 2-3 ವರ್ಷ ಮನೆಯಲ್ಲಿದ್ದರು

ಆ ಕಾರಣ ತಾನು ತನ್ನ ಮಕ್ಕಳನ್ನು ಕುರಿಕಾಯಲು ನ್ಯಾಯಾಲಯದ ಮುಂದೆ ಇರುವ ಆರೋಪಿಯ ಬಳಿ ಸೇರಿಸಿರುತ್ತೇನೆಂದು, ತಮ್ಮ ಬಳಿ ಸುಮಾರು 35 ಕುರಿಗಳು ಇರುವುದಾಗಿ, ಆರೋಪಿಯ ಬಳಿಯು ಸಹ ಸುಮಾರು 50 ಕುರಿ ಇರುವುದಾಗಿ, ಆರೋಪಿಯ ಜೊತೆ ಕುರಿ ಕಾಯಲು ತನ್ನ ಮಕ್ಕಳನ್ನು ಹಾಕಿದ್ದು, ಚಾಸಾ-6 ರವರು ಆರೋಪಿಯ ಬಳಿ 3 ವರ್ಷ ಕುರಿ ಕಾದಿದ್ದು, ಆತನಿಗೆ ಕುರಿ ಕಾಯಿದಿದ್ದರಿಂದ ಆರೋಪಿಯು ಒಟ್ಟು 18 ಕುರಿಗಳನ್ನು ಪಗಾರವಾಗಿ ಕೊಟ್ಟಿರುತ್ತಾನೆ ಎಂದು, ಚಾಸಾ-7 ರವರು ಆರೋಪಿಯ ಬಳಿ 1 ವರ್ಷ ಕುರಿ ಕಾದಿದ್ದು ಆತನಿಗೆ 5 ಕುರಿಗಳನ್ನು ಪಗಾರವಾಗಿ ಆರೋಪಿ ಕೊಟ್ಟಿದ್ದು, ಚಾಸಾ-6 ರವರಿಗೆ ತಾನು ಆರೋಪಿಯ ಬಳಿ ಕುರಿ ಮೇಯಿಸಲು ಬಿಟ್ಟಾಗ 9 ವರ್ಷ ಆಗಿರುವುದಾಗಿ, ಚಾಸಾ-5 ರವರಿಗೆ ಕುರಿ ಮೇಯಿಸಲು ಬಿಟ್ಟಾಗ 7 ವರ್ಷವಾಗಿರುವುದಾಗಿ, ಒಂದು ವರ್ಷಕ್ಕೆ ಒಬ್ಬ ಮಗನಿಗೆ 5 ಕುರಿಗಳನ್ನು ಕೊಡುವಂತೆ ಮಾತುಕತೆ ಆಗಿ ಆರೋಪಿಯ ಬಳಿ ಕುರಿ ಕಾಯಲು ಹಾಕಿದ್ದಾಗಿ, ತನ್ನ ಮಕ್ಕಳು ಊರು ಊರು ಅಡ್ಡಾಡಿ ಆರೋಪಿಯೊಂದಿಗೆ ಕುರಿಗಳನ್ನು ಮೇಯಿಸುತ್ತಿದ್ದರು ಎಂದು, ಈಗ್ಗೆ 5-6 ವರ್ಷಗಳ ಹಿಂದೆ ತಮ್ಮ ಮಕ್ಕಳನ್ನು ಆರೋಪಿಯು ಸರಿಯಾಗಿ ನೋಡಿಕೊಳ್ಳುತ್ತಿಲ್ಲವೆಂದು ಟಿ.ವಿ ಯಲ್ಲಿ ಬಂದಿದ್ದು, ನಂತರ ತಾವು ಈ ಸಂಬಂಧ ಆರೋಪಿಯನ್ನು ಫೋನ್ ಮಾಡಿ ಕೇಳಿದಾಗ ಆರೋಪಿ ತನ್ನ ಮಕ್ಕಳನ್ನು ಸರಕಾರಿ ಅಧಿಕಾರಿಗಳು ಕರೆದುಕೊಂಡು ಹೋಗಿದ್ದು ಕುಷ್ಟಗಿಗೆ ಬರುವಂತೆ ತಿಳಿಸಿದ್ದು, ತಾವು ಕುಷ್ಟಗಿಗೆ ಬಂದಾಗ ಮಕ್ಕಳು ಕೊಪ್ಪಳದಲ್ಲಿ ಇರುವುದು ತಿಳಿಯಿತೆಂದು, ನಂತರ ತಾವು ಕೊಪ್ಪಳಕ್ಕೆ ಹೋಗಿ ತಮ್ಮ ಮಕ್ಕಳನ್ನು ನೋಡಿರುತ್ತೇವೆಂದು, ತಮ್ಮ ಮಕ್ಕಳು ಆರೋಪಿಯು ಸರಿಯಾಗಿ ಊಟ ತಿಂಡಿ ಕೊಡುತ್ತಿರಲಿಲ್ಲ ಎಂದು ತಿಳಿಸಿದ್ದು, ಆರೋಪಿಯು ತನ್ನ ಮಕ್ಕಳನ್ನು ಬೆಳಿಗ್ಗೆ 6 ರಿಂದ ಸಂಜೆ 6 ಗಂಟೆಯುವರೆಗೆ ದುಡಿಸುತ್ತಿದ್ದನು ಎಂದು ತಿಳಿದುಬಂದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಸದರಿ

ಸಾಕ್ಷಿದಾರರನ್ನು ಆರೋಪಿ ಪರ ವಕೀಲರು ಪಾಟೀಸವಾಲು ಮಾಡಿದಾಗ, ಅವರು ತಮ್ಮ ತಂದೆ ಮತ್ತು ಆರೋಪಿಯು ಕೂಡಿ ಕುರಿಗಳನ್ನು ಮೇಯಿಸುತ್ತಿದ್ದರು ಎಂದು, ತಮ್ಮ ಮಕ್ಕಳು ಹಿಂದಿನಿಂದಲೂ ತಮ್ಮ ತಂದೆಯ ಜೊತೆ ಕುರಿ ಕಾಯಲು ಹೋಗುತ್ತಿದ್ದರು ಎಂದು ಸಾಕ್ಷಿ ನುಡಿದಿರುತ್ತಾರೆ. ಇವರ ಸಾಕ್ಷ್ಯದಿಂದ ಮಕ್ಕಳುಗಳು ಆರೋಪಿಯ ಕುರಿಗಳನ್ನು ಮಾತ್ರ ಮೇಯಿಸುತ್ತಿದ್ದರು ಎಂಬ ಬಗ್ಗೆ ಸಂದೇಹ ಮೂಡುತ್ತದೆ.

12. ಪ್ರಾ.ಸಾ - 6 ಸಂತೋಷ, ಈ ಪ್ರಕರಣದ ದೌರ್ಜನ್ಯಕ್ಕೆ ಒಳಗಾದರೆಂದ ಸಾಕ್ಷಿದಾರರು, ತಮ್ಮ ಸಾಕ್ಷ್ಯದಲ್ಲಿ ಚಾಸಾ-7 ತನ್ನ ತಮ್ಮ, ಚಾಸಾ-4 ಮತ್ತು 5 ಇನ್ನ ತಂದೆ-ತಾಯಿ ಎಂದು, ತಾನು 3 ನೇ ತರಗತಿಯವರೆಗೆ ಓದಿರುವುದಾಗಿ, ತಾನು ಶಾಲೆ ಬಿಟ್ಟು 8-9 ವರ್ಷಗಳಾಗಿದ್ದು, ತಾನು ಶಾಲೆ ಬಿಟ್ಟ ನಂತರ ತಮ್ಮ ಹೊಲ ಮನೆ ಕೆಲಸ ಮಾಡುತ್ತಿರುವುದಾಗಿ, ನ್ಯಾಯಾಲಯದ ಮುಂದೆ ಇರುವ ಆರೋಪಿ ಪರಿಚಯವಿರುತ್ತಾರೆಂದು, ಆರೋಪಿಯು ತನ್ನ ಅಜ್ಜ ಕೃಷ್ಣಪ್ಪರವರು ಕೂಡಿ ಕುರಿಗಳನ್ನು ಸಾಕುತ್ತಿದ್ದರು ಎಂದು, ಈಗ್ಗೆ 6 ವರ್ಷಗಳ ಹಿಂದೆ ತಾನು ಕುಷ್ಟಗಿಯ ಬಳಿ ಇರುವ ಮದಲಗಟ್ಟಿ ಕೆರೆಯ ಹತ್ತಿರ ಬಂದಿದ್ದು, ತನ್ನ ಅಜ್ಜ ಕೃಷ್ಣಪ್ಪರವರಿಗೆ ಹುಷಾರ ಇಲ್ಲದ ಕಾರಣ ತಾನು ಅವರ ಕುರಿಗಳನ್ನು ಮೇಯಿಸುತ್ತಿದ್ದೆನೆಂದು, ತಮ್ಮ ಅಜ್ಜನ ಕುರಿಗಳ ಜೊತೆ ಆರೋಪಿಗಳ ಕುರಿಗಳು ಸಹ ಇದ್ದಿದ್ದು, ತಾನು ಮತ್ತು ತನ್ನ ತಮ್ಮ ಚಾಸಾ-7 ರವರು ಒಟ್ಟಾಗಿ ಆ ದಿನ ಕುರಿ ಮೇಯಿಸುತ್ತಿದ್ದಾಗ ಯಾರೋ ಸರಕಾರಿ ಅಧಿಕಾರಿಗಳು ಬಂದು ತಮ್ಮನ್ನು ಶಾಲೆಗೆ ಹೋಗದೆ ಏಕೆ ಕುರಿ ಮೇಯಿಸುತ್ತಿರಾ ಎಂದು ತಿಳಿಸಿ ಕುಷ್ಟಗಿ ಪೋಲಿಸ ಠಾಣೆಗೆ ಕರೆದುಕೊಂಡು ಬಂದಿದ್ದು, ತಮ್ಮ ಬಳಿ ಬಂದಿದ್ದ ಅಧಿಕಾರಿಗಳ ಹೆಸರು ತನಗೆ ಗೊತ್ತಿಲ್ಲವೆಂದು, ಕುಷ್ಟಗಿ ಪೋಲಿಸರು ವಿಚಾರಿಸಿದಾಗ

ತಾನು ತನ್ನ ಅಜ್ಜ ಮತ್ತು ಆರೋಪಿಗಳ ಕುರಿಗಳನ್ನು ತಮ್ಮ ಅಜ್ಜನಿಗೆ ಹುಷಾರ ಇಲ್ಲದ ಕಾರಣ ಮೇಯಿಸುತ್ತಿದ್ದೆನೆಂದು ತಿಳಿಸಿದ್ದು, ನಂತರ ತಮ್ಮನ್ನು ಕೊಪ್ಪಳದ ಬಾಲ ಮಂದಿರಕ್ಕೆ ಕರೆದುಕೊಂಡು ಹೋಗಿದ್ದು, ಅಲ್ಲಿ ತನ್ನ ತಂದೆ ತಾಯಿ ಬಂದು ಮನೆಗೆ ಕರೆದುಕೊಂಡು ಹೋಗಿರುತ್ತಾರೆಂದು, ಆರೋಪಿ ಮತ್ತು ತಮ್ಮ ತಂದೆ ತಾಯಿ ನಡುವೆ ಕುರಿ ಮೇಯಿಸುವ ವಿಚಾರದಲ್ಲಿ ಯಾವುದೇ ಒಪ್ಪಂದ ಆಗಿರುವುದಿಲ್ಲವೆಂದು, ತಾನು ಆರೋಪಿಯ ಬಳಿ ಪಗಾರದ ಬದಲು ವರ್ಷಕ್ಕೆ 9 ಕುರಿಗಳಂತೆ ಕೆಲಸ ಮಾಡುತ್ತಿದ್ದೆನೆಂದರೆ ಸರಿಯಲ್ಲವೆಂದು, ತಾನು ಪೋಲಿಸರ ಮುಂದೆ ಮತ್ತು ಯಾವುದೇ ಅಧಿಕಾರಿಗಳ ಮುಂದೆ ಯಾವುದೇ ಹೇಳಿಕೆಗಳನ್ನು ನೀಡಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ. ಸದರಿ ಸಾಕ್ಷಿದಾರು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷಿ ನುಡಿದ ಕಾರಣ ಮಾನ್ಯ ಸ.ಸ.ಅ ರವರು ಇವರನ್ನು ಪಾಟೀಸವಾಲಿಗೆ ಒಳಪಡಿಸಿದ್ದು, ಪಾಟೀಸವಾಲಿನಲ್ಲಿಯೂ ಸಹ ಅಭಿಯೋಜನೆಯ ಪ್ರಕರಣಕ್ಕೆ ಪೂರಕವಾಗಿ ಸಾಕ್ಷಿ ನುಡಿ ದಿರುವುದಿಲ್ಲ. ಇವರು ಪೋಲಿಸರ ಮುಂದೆ ನೀಡಿದ್ದರೆಂದ ಹೇಳಿಕೆಗಳನ್ನು ನಿಪಿ - 5 ಎಂದು ಗುರುತಿಸಲಾಗಿದೆ.

13. ಪ್ರಾ.ಸಾ - 7 ಕಿರಣ, ಈ ಪ್ರಕರಣದ ದೌರ್ಜನ್ಯಕ್ಕೆ ಒಳಗಾದರೆಂದ ಸಾಕ್ಷಿದಾರರು, ತಮ್ಮ ಸಾಕ್ಷ್ಯದಲ್ಲಿ, ಚಾಸಾ-6 ತನ್ನ ಅಣ್ಣ, ಚಾಸಾ-4 ಮತ್ತು 5 ತನ್ನ ತಂದೆ-ತಾಯಿ ಎಂದು, ತಾನು 3 ನೇ ತರಗತಿಯವರೆಗೆ ಓದಿರುವುದಾಗಿ, ತಾನು ಶಾಲೆ ಬಿಟ್ಟು 7 ವರ್ಷಗಳಾಗಿದ್ದು, ತಾನು ಶಾಲೆ ಬಿಟ್ಟ ನಂತರ ಏನು ಮಾಡುತ್ತಿರುವು ದಿಲ್ಲವೆಂದು, ನ್ಯಾಯಾಲಯದ ಮುಂದೆ ಇರುವ ಆರೋಪಿ ಪರಿಚಯವಿರುವುದಾಗಿ, ಆರೋಪಿಯು ತನ್ನ ಅಜ್ಜ ಕೃಷ್ಣಪ್ಪರವರು ಕೂಡಿ ಕುರಿಗಳನ್ನು ಸಾಕುತ್ತಿದ್ದರು ಎಂದು, ಈಗ್ಗೆ 6 ವರ್ಷಗಳ ಹಿಂದೆ ತಾನು ಮತ್ತು ತನ್ನ ಅಣ್ಣ ಕುಷ್ಟಗಿಯ ಬಳಿ ಇರುವ

ಮದಲಗಟ್ಟಿ ಕೆರೆಯ ಹತ್ತಿರ ತಮ್ಮ ಅಜ್ಜ ಕುರಿ ಕಾಯುವ ಸ್ಥಳಕ್ಕೆ ಬಂದಿದ್ದು, ತಾನು ಮತ್ತು ತನ್ನ ಅಣ್ಣ ಚಾಸಾ-6 ರವರು ಸೇರಿ ಅಜ್ಜ ಕೃಷ್ಣಪ್ಪರವರಿಗೆ ಹುಷಾರ ಇಲ್ಲದ ಕಾರಣ ಕುರಿಗಳನ್ನು ಮೇಯಿಸುತ್ತಿದ್ದು, ತಮ್ಮ ಅಜ್ಜನ ಕುರಿಗಳ ಜೊತೆ ಆರೋಪಿಗಳ ಕುರಿಗಳು ಸಹ ಇದ್ದಿದ್ದು, ತಾನು ಮತ್ತು ತನ್ನ ಅಣ್ಣ ಚಾಸಾ-6 ರವರು ಒಟ್ಟಾಗಿ ಆ ದಿನ ಕುರಿ ಮೇಯಿಸುತ್ತಿದ್ದಾಗ ಟಿ.ವಿ-9 ರವರು ಮತ್ತು ಯಾರೋ ಸರಕಾರಿ ಅ ಧಿಕಾರಿಗಳು ಬಂದು ತಮ್ಮನ್ನು ಶಾಲೆಗೆ ಹೋಗದೆ ಏಕೆ ಕುರಿ ಮೇಯಿಸುತ್ತಿರಾ ಎಂದು ತಿಳಿಸಿ ಕುಷ್ಟಗಿ ಪೋಲಿಸ ಠಾಣೆಗೆ ಕರೆದುಕೊಂಡು ಬಂದಿದ್ದು, ತಮ್ಮ ಬಳಿ ಬಂದಿದ್ದ ಅಧಿಕಾರಿಗಳ ಹೆಸರು ತನಗೆ ಗೊತ್ತಿಲ್ಲವೆಂದು, ಕುಷ್ಟಗಿ ಪೋಲಿಸರು ವಿಚಾರಿಸಿದಾಗ ತಾನು ತನ್ನ ಅಜ್ಜ ಮತ್ತು ಆರೋಪಿಗಳ ಕುರಿಗಳನ್ನು ತಮ್ಮ ಅಜ್ಜನಿಗೆ ಹುಷಾರ ಇಲ್ಲದ ಕಾರಣ ಮೇಯಿಸುತ್ತಿದ್ದೆನೆಂದು ತಿಳಿಸಿದ್ದು, ನಂತರ ತಮ್ಮನ್ನು ಕೊಪ್ಪಳದ ಬಾಲ ಮಂದಿರಕ್ಕೆ ಕರೆದುಕೊಂಡು ಹೋಗಿದ್ದು, ಅಲ್ಲಿ ತನ್ನ ತಂದೆ ತಾಯಿ ಬಂದು ಮನೆಗೆ ಕರೆದುಕೊಂಡು ಹೋಗಿರುತ್ತಾರೆಂದು, ಆರೋಪಿ ಮತ್ತು ತಮ್ಮ ತಂದೆ ತಾಯಿ ನಡುವೆ ಕುರಿ ಮೇಯಿಸುವ ವಿಚಾರದಲ್ಲಿ ಯಾವುದೇ ಒಪ್ಪಂದ ಆಗಿರುವುದಿಲ್ಲವೆಂದು, ತಾನು ಆರೋಪಿಯ ಬಳಿ ಪಗಾರದ ಬದಲು ವರ್ಷಕ್ಕೆ 5 ಕುರಿಗಳಂತೆ ಕೆಲಸ ಮಾಡುತ್ತಿದ್ದೆನೆಂದರೆ ಸರಿಯಲ್ಲವೆಂದು, ತಾನು ಪೋಲಿಸರ ಮುಂದೆ ಮತ್ತು ಯಾವುದೇ ಅಧಿಕಾರಿಗಳ ಮುಂದೆ ಯಾವುದೇ ಹೇಳಿಕೆಗಳನ್ನು ನೀಡಿಲ್ಲ ಎಂದು ಸಾಕ್ಷ್ಯ ನುಡಿ ದಿರುತ್ತಾರೆ. ಸದರಿ ಸಾಕ್ಷಿದಾರು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷಿ ನುಡಿದ ಕಾರಣ ಮಾನ್ಯ ಸ.ಸ.ಅ ರವರು ಇವರನ್ನು ಪಾಟೀಸವಾಲಿಗೆ ಒಳಪಡಿಸಿದ್ದು, ಪಾಟೀಸವಾಲಿನಲ್ಲಿಯೂ ಸಹ ಅಭಿಯೋಜನೆಯ ಪ್ರಕರಣಕ್ಕೆ ಪೂರಕವಾಗಿ ಸಾಕ್ಷಿ ನುಡಿ ದಿರುವುದಿಲ್ಲ, ಇವರು ಪೋಲಿಸರ ಮುಂದೆ ನೀಡಿದ್ದರೆಂದ ಹೇಳಿಕೆಗಳನ್ನು ನಿಪಿ - 7 ಎಂದು ಗುರುತಿಸಲಾಗಿದೆ.

14. ಪ್ರಾ.ಸಾ - 8 ವೀರೇಶ ಬಿರಾದರ, ಈ ಪ್ರಕರಣದ ಫಿರ್ಯಾದಿದಾರರು, ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 10-8-2013 ರಂದು ತಮ್ಮ ತಾಲ್ಲೂಕಿನ ವ್ಯಾಪ್ತಿಯ ಮದಲಗಟ್ಟಿ ಗ್ರಾಮದ ಕೆರೆಯ ಹತ್ತಿರ ಜೀತ ಪದ್ದತಿಗೆ ಸಂಬಂಧಿಸಿದಂತೆ ಕಿರಣ್ ಮತ್ತು ಸಂತೋಷ ಎಂಬ ಇಬ್ಬರೂ ಬಾಲಕರನ್ನು ಹಿಡಿದಿರುವುದಾಗಿ ಸದರಿ ಬಾಲಕರುಗಳನ್ನು ಎಂ. ಜಿ. ಪೂಜಾರ್ ಎಂಬ ವ್ಯಕ್ತಿ ಜೀತಕ್ಕೆ ಇಟ್ಟುಕೊಂಡಿದ್ದನು ಎಂದು ಆತನ ವಿರುದ್ಧ ಕ್ರಮ ಕೈಗೊಳ್ಳುವಂತೆ ಅಧ್ಯಕ್ಷರು ಮಕ್ಕಳ ಕಲ್ಯಾಣ ಸಮಿತಿ ಕೊಪ್ಪಳ ಮತ್ತು ಕಂದಾಯ ನಿರೀಕ್ಷಕರು ಕುಷ್ಟಗಿಯವರು ತನಗೆ ಪತ್ರ ನೀಡಿದ್ದು ಅದರ ಅನುಸಾರ ತಾನು ಕುಷ್ಟಗಿ ಪೊಲೀಸ್ ಠಾಣೆಗೆ ಹೋಗಿ ಆರೋಪಿ ಎಂ. ಜಿ. ಪೂಜಾರರವರ ವಿರುದ್ಧ ಕ್ರಮ ಕೈಗೊಳ್ಳುವಂತೆ ನಿಪಿ - 8 ರಂತೆ ಲಿಖಿತ ದೂರನ್ನು ನೀಡಿರುತ್ತೇನೆ ಎಂದು, ತಾನು ದೂರಿನ ಜೊತೆ ಮಕ್ಕಳ ಕಲ್ಯಾಣ ಸಮಿತಿಯವರು ನೀಡಿದ ಸಂತೋಷ ಮತ್ತು ಕಿರಣ್‌ರವರ ನಿಪಿ - 4 ಮತ್ತು 6 ರಂತೆ ಹೇಳಿಕೆಗಳನ್ನು ಲಗತ್ತಿಸಿ ದೂರು ಸಲ್ಲಿಸಿರುತ್ತೇನೆಂದು, ಮಕ್ಕಳ ಕಲ್ಯಾಣ ಸಮಿತಿಯವರು ಕಂದಾಯ ನಿರೀಕ್ಷಕರಿಗೆ ಈ ಸಂಬಂಧ ಕ್ರಮ ಕೈಗೊಳ್ಳುವಂತೆ ನಿಪಿ - 9 ರಂತೆ ಪತ್ರ ನೀಡಿದ್ದು, ಕಂದಾಯ ನಿರೀಕ್ಷಕರು ತನಗೆ ಕ್ರಮ ಕೈಗೊಳ್ಳುವಂತೆ ನಿಪಿ - 10 ರಂತೆ ಪತ್ರವನ್ನು ಬರೆದಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

15. ಪ್ರಾ.ಸಾ - 9 ಮಹಾಲಿಂಗಪ್ಪ, ಈ ಪ್ರಕರಣದ ಸಾಕ್ಷಿದಾರರು, ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 9-8-2013 ರಂದು ವಿಜಯ ಕರ್ನಾಟಕ ದಿನ ಪತ್ರಿಕೆಯಲ್ಲಿ ಮಕ್ಕಳಿಬ್ಬರ ಜೀತ ಎಂಬ ತಲೆಬರಹದೊಂದಿಗೆ ವರದಿ ಬಂದಿದ್ದು ಅದನ್ನು ನೋಡಿದಾಗ ಕೊಪ್ಪಳ ಜಿಲ್ಲೆಯ ಕುಷ್ಟಗಿಯ ಮದಲಗಟ್ಟಿ ಗ್ರಾಮದ ನಿಡಶೇಸಿ ಕೆರಯ ಬಳಿ

ಮಕ್ಕಳಿಬ್ಬರನ್ನು ಜೀತಕ್ಕೆ ಇರಿಸಿಕೊಂಡು ಕುರಿ ಕಾಯಿಸಲಾಗುತ್ತಿದೆ ಎಂದು ಪ್ರಕಟಣೆ ಬಂದಿದ್ದು, ತಾನು ಈ ವಿಚಾರವನ್ನು ತಮ್ಮ ಸಮಿತಿಯ ಚಾಸಾ-11 ಮತ್ತು 12 ರವರಿಗೆ ತಿಳಿಸಿ ಸದರಿ ಸ್ಥಳಕ್ಕೆ ಹೋಗಲು ನಿರ್ಧರಿಸಿದ್ದು, ಅದರಂತೆ ದಿನಾಂಕಃ 10-8-2013 ರಂದು ತಾನು ಮತ್ತು ಚಾಸಾ-11 ಮತ್ತು 12 ರವರು ಕುಷ್ಟಗಿಯ ಮದಲಗಟ್ಟಿ ಗ್ರಾಮದ ನಿಡಶೇಸಿ ಕೆರಯ ಬಳಿ ಬೆಳಗ್ಗೆ ಸುಮಾರು 8-30 ರಿಂದ 9-00 ಗಂಟೆಯ ಸಮಯಕ್ಕೆ ಬಂದಿದ್ದಾಗಿ, ಸದರಿ ಸ್ಥಳದಲ್ಲಿ ಕಿರಣ ಮತ್ತು ಸಂತೋಷ ಎಂಬ ಇಬ್ಬರು ಮಕ್ಕಳು ಕುರಿ ಮೇಯಿಸುತ್ತಿದ್ದು ತಾನು ಸದರಿ ಇಬ್ಬರೂ ಮಕ್ಕಳನ್ನು ವಿಚಾರಣೆ ಮಾಡಿದಾಗ ಅವರು ತಮ್ಮ ತಂದೆ-ತಾಯಿ ತಮ್ಮನ್ನು ಆರೋಪಿ ಎಂ. ಜಿ. ಪೂಜಾರ-ಮುರಾರಿಯವರ ಬಳಿ ಜೀತಕ್ಕೆ ಇಟ್ಟಿರುವುದಾಗಿ ತಿಳಿಸಿದ್ದು, ಕಿರಣ್ ಎಂಬ ಬಾಲಕ ತನ್ನನ್ನು 1 ವರ್ಷಕ್ಕೆ 9 ಕುರಿ ಹಾಗೂ ಸಂತೋಷ ಎಂಬ ಬಾಲಕ ತನ್ನನ್ನು 1 ವರ್ಷಕ್ಕೆ 5 ಕುರಿ ಕೊಡಬೇಕೆಂಬ ಷರತ್ತಿನೊಂದಿಗೆ ಆರೋಪಿಯ ಬಳಿ ಜೀತಕ್ಕೆ ಇಟ್ಟಿರುವುದಾಗಿ ತಿಳಿಸಿರುವುದಾಗಿ, ಮಕ್ಕಳನ್ನು ವಿಚಾರ ಮಾಡಿದಾಗ ಅವರುಗಳು ತಮ್ಮನ್ನು ಮುಂಜಾನೆ 4 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಬಿಡುವಿಲ್ಲದೆ ಕೆಲಸ ಮಾಡಿಸುವುದಾಗಿ ಮತ್ತು ತಮಗೆ ಯಾವುದೇ ರಜೆಯನ್ನು ಕೊಡುವುದಿಲ್ಲಾ ಎಂದು ತಿಳಿಸಿದರು ಎಂದು, ಆರೋಪಿಯು ತಮಗೆ ಸರಿಯಾಗಿ ಊಟ-ತಿಂಡಿ ನೀಡುವುದಿಲ್ಲಾ ಎಂದು ಮತ್ತು ವಿನಾಕಾರಣ ಹೊಡೆಯುತ್ತಾರೆ ಎಂದು ತಿಳಿಸಿದ್ದು, ಸದರಿ ಮಕ್ಕಳು ತಾವು ವಿದ್ಯಾಭ್ಯಾಸ ಮಾಡಲು ಆಸಕ್ತಿ ಹೊಂದಿರುವುದಾಗಿ ಆದರೆ ಆರೋಪಿ ತಮ್ಮನ್ನು ಬಿಡುತ್ತಿರಲಿಲ್ಲಾ ಎಂದು ತಿಳಿಸಿರುವುದಾಗಿ, ತನ್ನ ಜೊತೆ ಬಂದಿದ್ದ ಯುನಿಸೆಫ್ ತಾಲ್ಲೂಕು ಸಂಯೋಜಕರಾದ ಚಾಸಾ-15 ರವರು ಮಕ್ಕಳ ಹೇಳಿಕೆಗಳನ್ನು ನಿಪಿ - 4 ಮತ್ತು 6 ರಂತೆ ಬರೆದುಕೊಂಡಿದ್ದಾಗಿ, ತಾವು ಆ ಸಮಯದಲ್ಲಿ ಮಕ್ಕಳನ್ನು ಜೀತಕ್ಕೆ ಇಟ್ಟುಕೊಂಡಿದ್ದ ಆರೋಪಿಯಾದ ಪೂಜಾರ-ಮುರಾರಿಯವರನ್ನು ನೋಡಿರುತ್ತೇನೆಂದು,

ನ್ಯಾಯಾಲಯದ ಮುಂದಿರುವ ಆರೋಪಿ ಸದರಿ ಆಸಾಮಿಯಾಗಿರುತ್ತಾನೆಂದು, ತಾವು ಅಲ್ಲಿಂದ ಮಕ್ಕಳನ್ನು ಕರೆದುಕೊಂಡು ಕುಷ್ಟಗಿಯ ಹಳೆ ಪ್ರವಾಸಿ ಮಂದಿರಕ್ಕೆ ಬಂದಿದ್ದಾಗಿ, ಸದರಿ ಮಕ್ಕಳಿಗೆ ಊಟ-ತಿಂಡಿ ಮತ್ತು ಬಟ್ಟೆಗಳನ್ನು ಒದಗಿಸಿ, ನಂತರ ಕುಷ್ಟಗಿಯ ಕಂದಾಯ ನಿರೀಕ್ಷಕರಿಗೆ ವಿಚಾರ ತಿಳಿಸಿ ಬರಮಾಡಿಕೊಂಡಿದ್ದು, ಚಾಸಾ-14 ಕಂದಾಯ ನಿರೀಕ್ಷಕರು ಪ್ರವಾಸಿ ಮಂದಿರಕ್ಕೆ ಬಂದಿದ್ದು ಅವರಿಗೆ ಈ ಸಂಬಂಧ ಕ್ರಮ ಕೈಗೊಳ್ಳಲು ನಿಪಿ - 9 ರಂತೆ ಲಿಖಿತ ವರದಿ ನೀಡಿದ್ದಾಗಿ, ತಾವು ಮಕ್ಕಳನ್ನು ಕರೆದುಕೊಂಡು ಕೊಪ್ಪಳದ ಸರ್ಕಾರಿ ಬಾಲಕರ ಬಾಲ ಮಂದಿರಕ್ಕೆ ಹೋಗಿ ಬಿಟ್ಟಿದ್ದು, ಈ ಘಟನೆಯ ಸಂಬಂಧ ಚಾಸಾ-1 ರವರು ದೂರು ನೀಡಿದ್ದು, ದಿನಾಂಕಃ 11-8-2013 ರಂದು ಪೊಲೀಸರು ತಮ್ಮನ್ನು ಕರೆಯಿಸಿದ್ದು, ತಾವು ಪೊಲೀಸ್ ಠಾಣೆಗೆ ಹೋಗಿ ನಡೆದ ವಿಚಾರವನ್ನು ತಿಳಿಸಿರುತ್ತೇವೆಂದು, ಪೊಲೀಸರು ತನ್ನನ್ನು ಗುನ್ನೆ ಸ್ಥಳಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಚಾಸಾ-2 ಮತ್ತು 3 ರ ಸಮಕ್ಷಮ ಸ್ಥಳ ಪಂಚನಾಮೆಯನ್ನು ಮಾಡಿರುತ್ತಾರೆಂದು, ನಂತರ ಮಕ್ಕಳನ್ನು ಗದಗ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯವರಿಗೆ ಕಳುಹಿಸಿಕೊಟ್ಟಿರುತ್ತೇವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

16. ಪ್ರಾ.ಸಾ - 10 ನಿಲೋಫರ್, ಈ ಪ್ರಕರಣದ ಪ್ರತ್ಯಕ್ಷ ಸಾಕ್ಷಿದಾರರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 9-8-2013 ರಂದು ವಿಜಯ ಕರ್ನಾಟಕ ದಿನ ಪತ್ರಿಕೆಯಲ್ಲಿ ಮಕ್ಕಳಿಬ್ಬರ ಜೀತ ಎಂಬ ತಲೆಬರಹದೊಂದಿಗೆ ವರದಿ ಬಂದಿದ್ದು ಅದನ್ನು ನೋಡಿದಾಗ ಕೊಪ್ಪಳ ಜಿಲ್ಲೆಯ ಕುಷ್ಟಗಿಯ ಮದಲಗಟ್ಟಿ ಗ್ರಾಮದ ನಿಡಶೇಸಿ ಕೆರಯ ಬಳಿ ಮಕ್ಕಳಿಬ್ಬರನ್ನು ಜೀತಕ್ಕೆ ಇರಿಸಿಕೊಂಡು ಕುರಿ ಕಾಯಿಸಲಾಗುತ್ತಿದೆ ಎಂದು ಪ್ರಕಟಣೆ ಬಂದಿದ್ದು, ತಾನು ಮತ್ತು ಚಾಸಾ-10 ಮತ್ತು 11 ರವರು ಈ ಬಗ್ಗೆ ಚರ್ಚಿಸಿ ದಾಳಿ ಮಾಡಲು ನಿರ್ಧರಿಸಿದ್ದು, ಅದರಂತೆ ದಿನಾಂಕಃ 10-8-2013 ರಂದು ತಾನು ಮತ್ತು

ಚಾಸಾ-10 ಮತ್ತು 11 ರವರು ಕುಷ್ಟಗಿಯ ಮದಲಗಟ್ಟಿ ಗ್ರಾಮದ ನಿಡಶೇಸಿ ಕೆರಯ ಬಳಿ ಬೆಳಗ್ಗೆ ಸುಮಾರು 9-00 ಗಂಟೆಯ ಸಮಯಕ್ಕೆ ಬಂದಿದ್ದು, ಸದರಿ ಸ್ಥಳದಲ್ಲಿ ಕಿರಣ ಮತ್ತು ಸಂತೋಷ ಎಂಬ ಇಬ್ಬರು ಮಕ್ಕಳು ಕುರಿ ಮೇಯಿಸುತ್ತಿದ್ದರು ಎಂದು, ತಾವು ಸದರಿ ಇಬ್ಬರೂ ಮಕ್ಕಳನ್ನು ವಿಚಾರಣೆ ಮಾಡಿದಾಗ ಅವರು ತಮ್ಮ ತಂದೆ-ತಾಯಿ ತಮ್ಮನ್ನು ಆರೋಪಿ ಎಂ. ಜಿ. ಪೂಜಾರ-ಮುರಾರಿಯವರ ಬಳಿ ಜೀತಕ್ಕೆ ಇಟ್ಟಿರುವುದಾಗಿ ತಿಳಿಸಿದ್ದು, ಕಿರಣ್ ಎಂಬ ಬಾಲಕ ತನ್ನನ್ನು 1 ವರ್ಷಕ್ಕೆ 9 ಕುರಿ ಹಾಗೂ ಸಂತೋಷ ಎಂಬ ಬಾಲಕ ತನ್ನನ್ನು 1 ವರ್ಷಕ್ಕೆ 5 ಕುರಿ ಕೊಡಬೇಕೆಂಬ ಷರತ್ತಿನೊಂದಿಗೆ ಆರೋಪಿಯ ಬಳಿ ಜೀತಕ್ಕೆ ಇಟ್ಟಿರುವುದಾಗಿ ತಿಳಿಸಿದ್ದು, ಮಕ್ಕಳನ್ನು ವಿಚಾರ ಮಾಡಿದಾಗ ಅವರುಗಳು ತಮ್ಮನ್ನು ಮುಂಜಾನೆ 4 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಬಿಡುವಿಲ್ಲದೆ ಕೆಲಸ ಮಾಡಿಸುವುದಾಗಿ ಮತ್ತು ತಮಗೆ ಯಾವುದೇ ರಜೆಯನ್ನು ಕೊಡುವುದಿಲ್ಲಾ ಎಂದು ತಿಳಿಸಿರುವುದಾಗಿ, ಆರೋಪಿಯು ತಮಗೆ ಸರಿಯಾಗಿ ಊಟ-ತಿಂಡಿ ನೀಡುವುದಿಲ್ಲಾ ಎಂದು ಮತ್ತು ವಿನಾಕಾರಣ ಹೊಡೆಯುತ್ತಾರೆ ಎಂದು ತಿಳಿಸಿದರು ಎಂದು, ಸದರಿ ಮಕ್ಕಳು ತಾವು ವಿದ್ಯಾಭ್ಯಾಸ ಮಾಡಲು ಆಸಕ್ತಿ ಹೊಂದಿರುವುದಾಗಿ ಆದರೆ ಆರೋಪಿ ತಮ್ಮನ್ನು ಬಿಡುತ್ತಿರಲಿಲ್ಲಾ ಎಂದು ತಿಳಿಸಿದ್ದು, ತಾವು ಮಕ್ಕಳ ಹೇಳಿಕೆಗಳನ್ನು ನಿಪಿ - 4 ಮತ್ತು 6 ರಂತೆ ದಾಖಲಿಸಿದ್ದು, ತಾವು ಆ ಸಮಯದಲ್ಲಿ ಮಕ್ಕಳನ್ನು ಜೀತಕ್ಕೆ ಇಟ್ಟುಕೊಂಡಿದ್ದ ಆರೋಪಿಯಾದ ಪೂಜಾರ-ಮುರಾರಿಯವರನ್ನು ನೋಡಿರುತ್ತೇವೆಂದು, ನ್ಯಾಯಾಲಯದ ಮುಂದಿರುವ ಆರೋಪಿ ಸದರಿ ಆಸಾಮಿಯಾಗಿರುತ್ತಾನೆಂದು, ತಾವು ಅಲ್ಲಿಂದ ಮಕ್ಕಳನ್ನು ಕರೆದುಕೊಂಡು ಕುಷ್ಟಗಿಯ ಹಳೆ ಪ್ರವಾಸಿ ಮಂದಿರಕ್ಕೆ ಬಂದಿದ್ದಾಗಿ, ಸದರಿ ಮಕ್ಕಳಿಗೆ ಊಟ-ತಿಂಡಿ ಮತ್ತು ಬಟ್ಟೆಗಳನ್ನು ಒದಗಿಸಿದ್ದು, ನಂತರ ಕುಷ್ಟಗಿಯ ಕಂದಾಯ ನಿರೀಕ್ಷಕರಿಗೆ ವಿಚಾರ ತಿಳಿಸಿ ಬರಮಾಡಿಕೊಂಡಿದ್ದು, ಚಾಸಾ-14 ಕಂದಾಯ ನಿರೀಕ್ಷಕರು ಪ್ರವಾಸಿ ಮಂ

ದಿರಕ್ಕೆ ಬಂದಿದ್ದು ಅವರಿಗೆ ಈ ಸಂಬಂಧ ಕ್ರಮ ಕೈಗೊಳ್ಳಲು ನಿಪಿ - 9 ರಂತೆ ಲಿಖಿತ ವರದಿ ನೀಡಿರುತ್ತೇವೆಂದು, ತಾವು ಮಕ್ಕಳನ್ನು ಕರೆದುಕೊಂಡು ಕೊಪ್ಪಳದ ಸರ್ಕಾರಿ ಬಾಲಕರ ಬಾಲ ಮಂದಿರಕ್ಕೆ ಹೋಗಿ ಬಿಟ್ಟಿದ್ದು, ಈ ಘಟನೆಯ ಸಂಬಂಧ ಚಾಸಾ-1 ರವರು ದೂರು ನೀಡಿದ್ದು, ದಿನಾಂಕಃ 11-8-2013 ರಂದು ಪೊಲೀಸರು ತಮ್ಮನ್ನು ಕರೆಯಿಸಿದ್ದು, ತಾವು ಪೊಲೀಸ್ ಠಾಣೆಗೆ ಹೋಗಿ ನಡೆದ ವಿಚಾರವನ್ನು ತಿಳಿಸಿರುತ್ತೇವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

17. ಪ್ರಾ.ಸಾ - 11 ಶರಣಪ್ಪ, ಈ ಪ್ರಕರಣದ ಪ್ರತ್ಯಕ್ಷ ಸಾಕ್ಷಿದಾರರು ತಮ್ಮ ಸಾಕ್ಷ್ಯದಲ್ಲಿ ದಿಃ 10-8-2013 ರಂದು ಚಾಸಾ-13 ಮತ್ತು 14 ರವರು ದೂರವಾಣಿ ಕರೆ ಮಾಡಿ ಮದಲಗಟ್ಟಿ ಸೀಮಾದ ಕೆರೆ ಹತ್ತಿರ ಎಂ.ಜೆ.ಪೂಜಾರ-ಮುರಾರಿ ಎಂಬುವವರು ಮಕ್ಕಳನ್ನು ಜೀತಕ್ಕೆ ಇಟ್ಟುಕೊಂಡು ಕುರಿ ಕಾಯಿಸುತ್ತಿದ್ದಾರೆ ಎಂದು ಮಾಹಿತಿ ನೀಡಿದ್ದು ತಾನು ಈ ವಿಷಯವನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆ ಕೊಪ್ಪಳ ಇವರಿಗೆ ಅಧ್ಯಕ್ಷರಾದ ಮಹಾಲಿಂಗಪ್ಪ ಮತ್ತು ಸದಸ್ಯರಾದ ಶೇಖರಗೌಡ ಮತ್ತು ನಿಲೋಫರ್ ಎಂಬುವವರಿಗೆ ಮಾಹಿತಿ ನೀಡಿರುತ್ತೇನೆಂದು, ಅವರು ಮದಲಗಟ್ಟಿ ಕೆರೆ ಹತ್ತಿರ ಹೋಗಿ ಜೀತಕ್ಕೆ ಇದ್ದ ಸಂತೋಷ ಲಮಾಣಿ ಮತ್ತು ಕಿರಣ್‌ಲಮಾಣಿ ಎಂಬುವವರನ್ನು ವಿಚಾರಣೆ ಮಾಡಿ ವಶಕ್ಕೆ ತೆಗೆದುಕೊಂಡರು ಆ ಸಮಯದಲ್ಲಿ ತಾನೂ ಸಹ ಇದ್ದೆನೆಂದು, ಸದರಿ ಮಕ್ಕಳು ಆರೋಪಿಯ ಬಳಿ ಜೀತಕ್ಕೆ ಇರುವುದಾಗಿ, ಆದರೆ ಆರೋಪಿ ಸರಿಯಾಗಿ ಊಟ ತಿಂಡಿ ಕೊಡುವುದಿಲ್ಲ ಎಂದು ತಿಳಿಸಿದ್ದು, ಮಕ್ಕಳು ಶಾಲೆಗೆ ಹೋಗಲು ಇಚ್ಚಿಸುವುದಾಗಿ ತಿಳಿಸಿದ್ದು ಮಕ್ಕಳನ್ನು ತಾವು ಕುಷ್ಟಗಿ ಪ್ರವಾಸಿ ಮಂದಿರಕ್ಕೆ ಕರೆದುಕೊಂಡು ಬಂದಿದ್ದು, ಈ ಸಂಬಂಧ ದೂರನ್ನು ಚಾಸಾ-1 ರವರು

ನೀಡಿರುತ್ತಾರೆಂದು, ನಿಪಿ-4 ಮತ್ತು 6 ರ ಕೈ ಬರಹ ತನ್ನದಾಗಿರುವುದಾಗಿ ಅದನ್ನು ಮಕ್ಕಳ ಹೇಳಿಕೆಯಂತೆ ಬರೆದಿರುತ್ತೇನೆ ಸಾಕ್ಷ್ಯ ನುಡಿದಿರುತ್ತಾರೆ.

18. ಪ್ರಾ.ಸಾ - 12 ಮಹಾದೇವ, ಪೋಲಿಸ್ ನಿರೀಕ್ಷಕರು, ಇವರು ಸಾಕ್ಷ್ಯದಲ್ಲಿ ದಿಃ 10-8-13 ರಂದು ರಾತ್ರಿ 10-00 ಗಂಟೆ ಸಮಯದಲ್ಲಿ ತಾನು ಠಾಣಾ ಪ್ರಭಾರದಲ್ಲಿ ಇದ್ದಾಗ ಕುಷ್ಟಗಿ ತಹಸೀಲ್ದಾರ್‌ರವರ ಕಚೇರಿಯಿಂದ ಜೀತ ಪದ್ದತಿಯ ಸಂಬಂಧ ನಿಪಿ - 8 ರಂತೆ ದೂರು ಬಂದಿದ್ದು ಅದನ್ನು ಸ್ವೀಕರಿಸಿ ಗುನ್ನೆ ನಂಃ147/13ರಂತೆ ಪ್ರಕರಣ ದಾಖಲಿಸಿ, ನಿಪಿ - 11 ರಂತೆ ಪ್ರ ವ ವರದಿಯನ್ನು ಸಲ್ಲಿಸಿರುತ್ತೇನೆಂದು, ದೂರಿನ ಜೊತೆ ನಿಪಿ - 4, 6, 9 ಮತ್ತು 10 ರಂತೆ ಚಾಸಾ-6 ಮತ್ತು 7 ರವರ ಹೇಳಿಕೆಗಳನ್ನು ಹಾಗೂ ಮಕ್ಕಳ ಕಲ್ಯಾಣ ಸಮಿತಿಯವರ ವರದಿಯನ್ನು ಸಲ್ಲಿಸಿರುವುದಾಗಿ, ದಿಃ 11-8-13 ರಂದು ಗುನ್ನೆ ಜಾಗಕ್ಕೆ ಹೋಗಿ ಬೆಳಗ್ಗೆ 9-00 ರಿಂದ 9-45 ರವರೆಗೆ ಚಾಸಾ-2 ಮತ್ತು 3 ರವರ ಸಮಕ್ಷಮ ಚಾಸಾ-10 ರವರು ತೋರಿಸಿದ ಜಾಗದಲ್ಲಿ ನಿಪಿ - 1 ರನತೇ ಸ್ಥಳ ಪಂಚನಾಮೆಯನ್ನು ಮಾಡಿರುತ್ತೇನೆಂದು, ಅದೇ ದಿನ ಚಾಸಾ-8 ರಿಂದ 15 ರವರ ಹೇಳಿಕೆಗಳನ್ನು ದಾಖಲಿಸಿರುವುದಾಗಿ, ತಾನು ಚಾಸಾ-17 ರವರನ್ನು ಕೊಪ್ಪಳದ ಬಾಲ ಮಂದಿರಕ್ಕೆ ಭೇಟಿಯಾಗಿ ನೊಂದ ಬಾಲಕರ ಹೇಳಿಕೆಗಳನ್ನು ದಾಖಲಿಸಿಕೊಂಡು ಬರುವಂತೆ ನೇಮಕ ಮಾಡಿ ಕಳಿಸಿದ್ದೆನು, ಚಾಸಾ-17 ರವರು ಬಾಲಮಂದಿರಕ್ಕೆ ಹೋಗಿ ನೊಂದ ಮಕ್ಕಳಾದ ಸಂತೋಷ ಮತ್ತು ಕಿರಣ್ ರವರ ಹೇಳಿಕೆಗಳನ್ನು ನಿಪಿ - 5 ಮತ್ತು 7 ರಂತೆ ದಾಖಲಿಸಿ ತನ್ನ ಮುಂದೆ ಹಾಜರ್ ಮಾಡಿರುತ್ತಾರೆಂದು, ದಿಃ 12-8-13 ರಂದು ಚಾಸಾ-4 ಮತ್ತು 5 ರವರ ಹೇಳಿಕೆಗಳನ್ನು ದಾಖಲಿಸಿರುತ್ತೇನೆಂದು, ದಿಃ 23-8-13 ರಂದು ಮಕ್ಕಳ ಜನ್ಮ ದಿನಾಂಕದ ಬಗ್ಗೆ ಸರ್ಕಾರಿ ಪ್ರಾಥಮಿಕ ಶಾಲೆ ಜಲಗೇರಿ ತಾಂಡಾ ಇವರಿಂದ ನಿಪಿ - 12 ರಂತೆ ಶಾಲಾ

ದೃಢೀಕರಣ ಪತ್ರವನ್ನು ಪಡೆದಿರುತ್ತೇನೆಂದು, ನಂತರ ತನಿಖೆ ಮುಗಿಸಿ ಆರೋಪಿಯ ವಿರುದ್ದ ದೋಷಾರೋಪಣಾ ಪತ್ರ ಸಲ್ಲಿಸಿರುವುದಾಗಿ, ಚಾಸಾ-8 ಮತ್ತು 9 ರವರು ತನ್ನ ಮುಂದೆ ನಿಪಿ-2 ಮತ್ತು 3 ರಂತೆ ಹೇಳಿಕೆಗಳನ್ನು ನೀಡಿರುತ್ತಾರೆಂದು ಮತ್ತು ಆರೋಪಿಯು ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಪಡೆದಿರುತ್ತಾನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

19. ಪ್ರಾ.ಸಾ - 13 ಕನಕಾಚಲ, ನಿವೃತ್ತ ಎ.ಎಸ್.ಐ. ರವರು ತಮ್ಮ ಸಾಕ್ಷ್ಯದಲ್ಲಿ ದಿಃ 11-8-13 ರಂದು ಚಾಸಾ-18 ರವರು ಆದೇಶ ಮಾಡಿ ಈ ಪ್ರಕರಣದ ನೊಂದ ಬಾಲಕರ ಹೇಳಿಕೆಯನ್ನು ಕೊಪ್ಪಳದ ಬಾಲಮಂದಿರದಲ್ಲಿ ದಾಖಲಿಸಿಕೊಂಡು ಬರುವಂತೆ ತಿಳಿಸಿದ ಮೇರೆಗೆ ಸದರಿ ಬಾಲ ಮಂದಿರಕ್ಕೆ ಹೋಗಿ ಚಾಸಾ-6 ಮತ್ತು 7 ರವರ ಹೇಳಿಕೆಗಳನ್ನು ನಿಪಿ - 5 ಮತ್ತು 6 ರಂತೆ ದಾಖಲಿಸಿಕೊಂಡು ಬಂದು ಚಾಸಾ-18 ರವರಿಗೆ ಸಲ್ಲಿಸಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ.

20. ಪ್ರಾ.ಸಾ - 14 ಮರಿಸ್ವಾಮಿ, ಈ ಪ್ರಕರಣದ ಪ್ರತ್ಯಕ್ಷ ಸಾಕ್ಷಿದಾರರು ತಮ್ಮ ಸಾಕ್ಷ್ಯದಲ್ಲಿ ದಿಃ 10-8-13 ರಂದು ತಾನು ಮತ್ತು ಚಾಸಾ-14 ಸೇರಿ ತಮ್ಮ ಗ್ರಾಮದ ಮದಲಗಟ್ಟಿ ಕೆರೆ ಬಳಿ ಹೋಗಿದ್ದು, ಸದರಿ ಸ್ಥಳದಲ್ಲಿ ಕುರಿ ಕಾಯುತ್ತಿದ್ದು, ಸದರಿ ಕುರಿ ಕಾಯುತ್ತಿದ್ದ ಇಬ್ಬರು ಮಕ್ಕಳು ತಮಗೆ ಹಣ ಕೊಡುವಂತೆ ತಾವು ಸಂಕಷ್ಟದಲ್ಲಿರುವುದಾಗಿ ಮತ್ತು ಊರಿಗೆ ಹೋಗಬೇಕೆಂದು ಕೇಳಿದ್ದು ಅವರ ಹೆಸರನ್ನು ವಿಚಾರಿಸಿದಾಗ ಅವರು ತಮ್ಮ ಹೆಸರು ಸಂತೋಷ ಮತ್ತು ಕಿರಣ ಎಂದು ತಿಳಿಸಿದ್ದು, ತಾವು ಎಂ.ಜೆ. ಪೂಜಾರ(ಮುರಾರಿ)ರವರ ಬಳಿ ಕುರಿ ಕಾಯುತ್ತಿರುವುದಾಗಿ ತಮಗೆ ಸರಿಯಾಗಿ ಊಟ ಬಟ್ಟೆ ಕೊಡುವುದಿಲ್ಲ ಎಂದು ಹೆಚ್ಚಿನ ಕೆಲಸ ಮಾಡಿಸುತ್ತಾರೆ ಎಂದು ತಮ್ಮನ್ನು ಶಾಲೆಗೆ

ಹೋಗಲು ಬಿಡುತ್ತಿಲ್ಲ ಎಂದು ತಿಳಿಸಿದರು ಎಂದು, ಈ ವಿಚಾರ ತಿಳಿದ ತಾನು ಮಕ್ಕಳ ತಾಲೂಕು ಸಂಯೋಜನಾಧಿಕಾರಿ ಚಾಸಾ-15 ಶರಣಪ್ಪನವರಿಗೆ ಫೋನ್ ಮಾಡಿ ತಿಳಿಸಿರುವುದಾಗಿ, ಮಕ್ಕಳ ಕಲ್ಯಾಣ ಸಮಿತಿಯವರು ದಿಃ11-8-13 ರಂದು ತಮ್ಮ ಊರಿನ ಕೆರೆಯ ಬಳಿ ಬಂದು ಆರೋಪಿಯ ವಶದಲ್ಲಿ ಇದ್ದ ಸಂತೋಷ ಮತ್ತು ಕಿರಣ್ ಎಂಬ ಇಬ್ಬರು ಮಕ್ಕಳನ್ನು ಕರೆದುಕೊಂಡು ಹೋಗಿದ್ದು, ನ್ಯಾಯಾಲಯದ ಮುಂದೆ ಇರುವ ಆರೋಪಿ ಮಕ್ಕಳನ್ನು ಜೀತಕ್ಕೆ ಇರಿಸಿಕೊಂಡವರಾಗಿದ್ದು ತಾನು ಮತ್ತು ಸುರೇಶ ಆತನನ್ನು ದಿಃ 10-8-13 ಮತ್ತು 11-8-13 ರಂದು ನೋಡಿರುತ್ತೇವೆಂದು, ಅದರಂತೆ ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

21. ಪ್ರಾ.ಸಾ - 15 ಸುರೇಶ, ಈ ಪ್ರಕರಣದ ಪ್ರತ್ಯಕ್ಷ ಸಾಕ್ಷಿದಾರರು ತಮ್ಮ ಸಾಕ್ಷ್ಯದಲ್ಲಿ ದಿಃ 10-8-13 ರಂದು ತಾನು ಮತ್ತು ಚಾಸಾ-13 ಸೇರಿ ತಮ್ಮ ಗ್ರಾಮದ ಮದಲಗಟ್ಟಿ ಕೆರೆ ಬಳಿ ಹೋಗಿದ್ದು, ಸದರಿ ಸ್ಥಳದಲ್ಲಿ ಕುರಿ ಕಾಯುತ್ತಿದ್ದು, ಸದರಿ ಕುರಿ ಕಾಯುತ್ತಿದ್ದ ಇಬ್ಬರು ಮಕ್ಕಳು ತಮಗೆ ಹಣ ಕೊಡುವಂತೆ ತಾವು ಸಂಕಷ್ಟದಲ್ಲಿರುವುದಾಗಿ ಮತ್ತು ಊರಿಗೆ ಹೋಗಬೇಕೆಂದು ಕೇಳಿದ್ದು, ಅವರ ಹೆಸರನ್ನು ವಿಚಾರಿಸಿದಾಗ ಅವರು ತಮ್ಮ ಹೆಸರು ಸಂತೋಷ ಮತ್ತು ಕಿರಣ ಎಂದು ತಿಳಿಸಿದ್ದಾಗಿ, ತಾವು ಎಂ.ಜೆ.ಪೂಜಾರ (ಮುರಾರಿ)ರವರ ಬಳಿ ಕುರಿ ಕಾಯುತ್ತಿರುವುದಾಗಿ ತಮಗೆ ಸರಿಯಾಗಿ ಊಟ ಬಟ್ಟೆ ಕೊಡುವುದಿಲ್ಲ ಎಂದು ಹೆಚ್ಚಿನ ಕೆಲಸ ಮಾಡಿಸುತ್ತಾರೆ ಎಂದು ತಮ್ಮನ್ನು ಶಾಲೆಗೆ ಹೋಗಲು ಬಿಡುತ್ತಿಲ್ಲ ಎಂದು ತಿಳಿಸಿರುವುದಾಗಿ, ಈ ವಿಚಾರ ತಿಳಿದ ಚಾಸಾ-13 ರವರು ಮಕ್ಕಳ ತಾಲೂಕು ಸಂಯೋಜನಾಧಿಕಾರಿ ಚಾಸಾ-15 ಶರಣಪ್ಪನವರಿಗೆ ಫೋನ್ ಮಾಡಿ ತಿಳಿಸಿದರು. ಮಕ್ಕಳ ಕಲ್ಯಾಣ ಸಮಿತಿಯವರು ದಿಃ 11-8-13 ರಂದು ತಮ್ಮ ಊರಿನ ಕೆರೆಯ ಬಳಿ ಬಂದು ಆರೋಪಿಯ ವಶದಲ್ಲಿ ಇದ್ದ ಸಂತೋಷ ಮತ್ತು ಕಿರಣ್ ಎಂಬ

ಇಬ್ಬರು ಮಕ್ಕಳನ್ನು ಕರೆದುಕೊಂಡು ಹೋಗಿದ್ದು, ನ್ಯಾಯಾಲಯದ ಮುಂದೆ ಇರುವ ಆರೋಪಿ ಮಕ್ಕಳನ್ನು ಜೀತಕ್ಕೆ ಇರಿಸಿಕೊಂಡವರಾಗಿದ್ದು ತಾನು ಮತ್ತು ಮರಿಸ್ವಾಮಿ ಆತನನ್ನು ದಿಃ 10-8-13 ಮತ್ತು 11-8-13 ರಂದು ನೋಡಿರುತ್ತೇವೆಂದು, ಅದರಂತೆ ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

22. ಪ್ರಾ.ಸಾ - 16 ಶರಣಪ್ಪ, ಗ್ರಾಮ ಲೆಕ್ಕಾಧಿಕಾರಿಗಳು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ- 10-08-2013 ರಂದು ಮಕ್ಕಳ ಕಲ್ಯಾಣ ಸಮಿತಿ ಕೊಪ್ಪಳ ಜಿಲ್ಲಾ, ಕೊಪ್ಪಳರವರು ತನಗೆ ಒಂದು ಲಿಖಿತ ಮಾಹಿತಿಯನ್ನು ನೀಡಿ ಆರೋಪಿ ಎಮ್‌ಜೆ ಪೂಜಾರವರ ಬಳಿ ಇಬ್ಬರೂ ಬಾಲ ಕಾರ್ಮಿಕರು ಜೀತ ಮಾಡುತ್ತಿದ್ದುದಾಗಿ ಸದರಿ ಬಾಲಕರನ್ನು ತಮ್ಮ ವಶಕ್ಕೆ ತೆಗೆದುಕೊಂಡು ಬಾಲ ಮಂದಿರದಲ್ಲಿ ಇರಿಸಲಾಗಿರುತ್ತದೆ ಎಂದು ತಿಳಿಸಿದ್ದು, ಜೀತಕ್ಕೆ ಇಟ್ಟುಕೊಂಡಿದ್ದ ಆರೋಪಿಯ ವಿರುದ್ದ ಕ್ರಮ ತೆಗೆದುಕೊಳ್ಳುವಂತೆ ತನಗೆ ನಿಪಿ - 9 ರಂತೆ ಪತ್ರ ನೀಡಿದ್ದು, ಅದನ್ನು ತಾನು ಆ ದಿನ ಸ್ವಿಕರಿಸಿದ್ದಾಗಿರುತ್ತದೆ ಎಂದು, ತಾನು ಅದೇ ದಿನ ಈ ಸಂಬಂಧ ಮುಂದಿನ ಕ್ರಮ ಕೈಗೊಳ್ಳಲು ಚಾಸಾ 1 ತಹಶೀಲ್ದಾರವರಿಗೆ ನಿಪಿ - 10 ರಂತೆ ಲಿಖಿತ ಮನವಿ ಪತ್ರ ಸಲ್ಲಿಸಿರುತ್ತೇನೆಂದು, ಆರೋಪಿಯು ಸಂತೋಷ ಮತ್ತು ಕಿರಣ್ ಎಂಬ ಮಕ್ಕಳುಗಳನ್ನು ಜೀತಕ್ಕೆ ಇಟ್ಟುಕೊಂಡಿದ್ದನೆಂದು, ತನ್ನಿಂದ ಮಾಹಿತಿ ಪಡೆದ ಚಾಸಾ 1 ರವರು ಆರೋಪಿಯ ವಿರುದ್ದ ಪೋಲಿಸ್ ಠಾಣೆಯಲ್ಲಿ ದೂರು ಸಲ್ಲಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

23. ಒಟ್ಟಾರೆ, ಈ ಪ್ರಕರಣದ ಅಂಶಗಳನ್ನು ಪರಿಶೀಲಿಸಿದಾಗ ಮಕ್ಕಳ ಕಲ್ಯಾಣ ಸಮಿತಿಯ ಅಧಿಕಾರಿಗಳು ಮತ್ತು ಸದಸ್ಯರು ಹಾಗೂ ತನಿಖಾಧಿಕಾರಿಗಳು ಅಭಿಯೋಜನೆಯ ಪ್ರಕರಣಕ್ಕೆ ಪೂರಕವಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಪ್ರಕರಣದಲ್ಲಿ ಪ್ರಮುಖ ಪ್ರತ್ಯಕ್ಷ ಸಾಕ್ಷಿದಾರರಾದ ಪ್ರಾ.ಸಾ. 3 ಮತ್ತು 4 ರವರು ಅಭಿಯೋಜನೆಯ ಪ್ರಕರಣಕ್ಕೆ ಸಂಪೂರ್ಣ ಪ್ರತಿಕೂಲವಾಗಿ ಸಾಕ್ಷಿ ನುಡಿದಿರುತ್ತಾರೆ. ಮುಂದುವರೆದು, ಈ ಪ್ರಕರಣದಲ್ಲಿ ದೌರ್ಜನ್ಯಕ್ಕೆ ಒಳಗಾದವರೆಂದು ಪ್ರತಿಬಿಂಭಿಸಿರುವ ಪ್ರಾ.ಸಾ. 6 ಮತ್ತು 7 ರವರು ತಮ್ಮ ಸಾಕ್ಷ್ಯದಲ್ಲಿ ತಾವುಗಳು ತಮ್ಮ ಅಜ್ಜ ಕೃಷ್ಣಪ್ಪ ರವರಿಗೆ ಹುಷಾರು ಇಲ್ಲದ ಕಾರಣ ಅವರ ಕುರಿಗಳನ್ನು ಮೇಯಿಸುತ್ತಿದ್ದೇವು ಎಂದು ತಮ್ಮ ಅಜ್ಜನ ಕುರಿಗಳ ಜೊತೆ ಆರೋಪಿಗಳ ಕುರಿಗಳು ಸಹ ಇದ್ದವು ಎಂದು, ಆರೋಪಿ ಮತ್ತು ತಮ್ಮ ತಂದೆ ತಾಯಿ ನಡುವೆ ಕುರಿ ಮೇಯಿಸುವ ವಿಚಾರದಲ್ಲಿ ಯಾವುದೇ ಒಪ್ಪಂದ ಆಗಿರುವುದಿಲ್ಲವೆಂದು ಸಾಕ್ಷಿ ನುಡಿದಿರುತ್ತಾರೆ. ಇವರ ಸಾಕ್ಷ್ಯವು ಅಭಿಯೋಜನೆಯ ಪ್ರಕರಣಕ್ಕೆ ತೀವ್ರ ಹಿನ್ನಡೆ ಉಂಟುಮಾಡಿರುತ್ತದೆ. ಪ್ರಾ.ಸಾ. 1 ಮತ್ತು 2 ಮಹಜರ್ ಸಾಕ್ಷಿದಾರರು ಸಹ ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷಿ ನುಡಿ ದಿರುತ್ತಾರೆ. ಒಟ್ಟಾರೆ, ಅಭಿಯೋಜನೆಯು ಆರೋಪಿಯ ವಿರುದ್ದ ಈ ಪ್ರಕರಣವನ್ನು ಸಂಶಯಕ್ಕೆ ಆಸ್ಪದವಿಲ್ಲದಂತೆ ಸಾಭೀತುಪಡಿಸಲು ವಿಫಲವಾಗಿರುತ್ತದೆ. ಸಂಶಯದ ಲಾಭವನ್ನು ಆರೋಪಿಗೆ ನೀಡುವುದು ಸೂಕ್ತವೆಂದು ನ್ಯಾಯಾಲಯ ನಿರ್ಧರಿಸಿರುತ್ತದೆ. ಆ ಕಾರಣ ಅಂಶ 1 ನ್ನು ನಕಾರಾತ್ಮಕವಾಗಿ ಉತ್ತರಿಸುತ್ತೇನೆ.

24. **<u>ಅಂಶ 2 </u>:-** ಮೇಲ್ಕಂಡಂತೆ ಚರ್ಚಿಸಿ ಬಂದ ನಿರ್ಣಯದಂತೆ ಈ ಕೆಳಕಂಡ ಆದೇಶ ಹೊರಡಿಸಿರುತ್ತೇನೆ.

**ಆ ದೇ ಶ**

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1) ರಡಿಯಲ್ಲಿ ಆರೋಪಿಯ ವಿರುದ್ದ ಹೊರಿಸಲಾದ ಕಲಂ 16 ರ ಜೀತ ಪದ್ದತಿ ನಿರ್ಮೂಲನಾ ಕಾಯ್ದೆ 1976 ರಡಿಯಲ್ಲಿನ ಆರೋಪಗಳಿಂದ ನಿರ್ದೋಷಿ ಎಂದು ತೀರ್ಮಾನಿಸಿ ಬಿಡುಗಡೆಗೊಳಿಸಿದೆ.

ದಂಡ ಪ್ರಕ್ರಿಯಾ ಸಂಹಿತೆ ಕಲಂ 437(ಎ) ರ ಅನ್ವಯ ಆರೋಪಿತನ ಜಾಮೀನುದಾರರ ಜಾಮೀನು ಮುಚ್ಚಳಿಕೆಯನ್ನು ಇನ್ನೂ 6 ತಿಂಗಳು ಜಾರಿಯಲ್ಲಿರುವಂತೆ ಆದೇಶಿಸಲಾಗಿದೆ.

(ಶಿಘ್ರಲಿಪಿಗಾರನಿಗೆ ನೇರವಾಗಿ ಕಂಪ್ಯೂಟರಿಗೆ ಅಳವಡಿಸುವಂತೆ ಉಕ್ತಲೇಖನ ಕೊಟ್ಟಿದ್ದು, ನಂತರದಲ್ಲಿ ತೀರ್ಪನ್ನು ಓದಿ, ತಿದ್ದುಪಡಿ ಮಾಡಿ ಈ ದಿನ ಅಂದರೆ **ದಿನಾಂಕಃ 01 ನೇ** ತಾರೀಖು **ಏಪ್ರಿಲ್ - 2019** ರಂದು ತೆರೆದ ನ್ಯಾಯಾಲಯದಲ್ಲಿ ಉದ್ಘೋಷಿಸಿದ್ದೇನೆ)

**(ಬಿ.ಕೇಶವಮೂರ್ತಿ)**
ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಕುಷ್ಟಗಿ.

**ಅನುಬಂಧ**

**ಅಭಿಯೋಜನೆಯ ಪರ ವಿಚಾರಣೆಯಾದ ಸಾಕ್ಷಿಗಳ ಪಟ್ಟಿ**

| | | |
|---|---|---|
| ಪ್ರಾ.ಸಾ. 1 | ಃ | ಮರಿಸ್ವಾಮಿ ತಂದೆ ರಾಜಪ್ಪ. |
| ಪ್ರಾ.ಸಾ. 2 | ಃ | ಹನಮಗೌಡ ತಂದೆ ರಾಮನಗೌಡ. |
| ಪ್ರಾ.ಸಾ. 3 | ಃ | ಹನಮಪ್ಪ ತಂದೆ ಭೀಮಪ್ಪ. |
| ಪ್ರಾ.ಸಾ. 4 | ಃ | ಮಾರುತಿ ತಂದೆ ಮುದಕಪ್ಪ. |
| ಪ್ರಾ.ಸಾ. 5 | ಃ | ಲಕ್ಷ್ಮವ್ವ ಗಂಡ ರಮೇಶ. |
| ಪ್ರಾ.ಸಾ. 6 | ಃ | ಸಂತೋಷ ತಂದೆ ರಮೇಶ. |
| ಪ್ರಾ.ಸಾ. 7 | ಃ | ಕಿರಣ ತಂದೆ ರಮೇಶ. |
| ಪ್ರಾ.ಸಾ. 8 | ಃ | ವೀರೇಶ ಬಿರಾದರ ತಂದೆ ಹನಮಂತರಾಯ ಬಿರಾದರ. |
| ಪ್ರಾ.ಸಾ. 9 | ಃ | ಮಹಾಲಿಂಗಪ್ಪ ತಂದೆ ಮಲ್ಲಪ್ಪ ದೋಟಿಹಾಳ. |

ಪ್ರಾ.ಸಾ. 10 : ನಿಲೋಫರ್ ತಂದೆ ಶಾಬುದ್ದೀನ್ ಸಾಬ್.
ಪ್ರಾ.ಸಾ. 11 : ಶರಣಪ್ಪ ತಂದೆ ದುರುಗಪ್ಪ.
ಪ್ರಾ.ಸಾ. 12 : ಮಹಾದೇವ ತಂದೆ ಜಂಬಯ್ಯ ಪಂಚಮುಖಿ.
ಪ್ರಾ.ಸಾ. 13 : ಕನಕಾಚಲ ತಂದೆ ರಾಘವೇಂದ್ರರಾವ್.
ಪ್ರಾ.ಸಾ. 14 : ಮರಿಸ್ವಾಮಿ ತಂದೆ ಹನುಮಪ್ಪ ಕನಕಗಿರಿ.
ಪ್ರಾ.ಸಾ. 15 : ಸುರೇಶ ತಂದೆ ಅಯ್ಯಪ್ಪ.
ಪ್ರಾ.ಸಾ. 16 : ಶರಣಪ್ಪ ತಂದೆ ಸಂಜೀವಪ್ಪ.

**ಅಭಿಯೋಜನೆಯ ಪರ ಗುರುತಿಸಲಾದ ದಾಖಲೆಗಳ ಪಟ್ಟಿ:**

ನಿಪಿ- 1 : ಸ್ಥಳ ಪಂಚನಾಮೆ.
ನಿಪಿ- 2 : ಪ್ರಾ.ಸಾ. 3 ರವರ ಹೇಳಿಕೆ.
ನಿಪಿ- 3 : ಪ್ರಾ.ಸಾ. 4 ರವರ ಹೇಳಿಕೆ.
ನಿಪಿ- 4 : ಮಕ್ಕಳ ಕಲ್ಯಾಣ ಸಮಿತಿಯವರು ನೀಡಿದ ಸಂತೋಷ ರವರ ಹೇಳಿಕೆ.
ನಿಪಿ- 5 : ಪ್ರಾ.ಸಾ. 6 ರವರ ಹೇಳಿಕೆ.
ನಿಪಿ- 6 : ಮಕ್ಕಳ ಕಲ್ಯಾಣ ಸಮಿತಿಯವರು ನೀಡಿದ ಕಿರಣ ರವರ ಹೇಳಿಕೆ.
ನಿಪಿ- 7 : ಪ್ರಾ.ಸಾ. 7 ರವರ ಹೇಳಿಕೆ.
ನಿಪಿ- 8 : ದೂರು.
ನಿಪಿ- 9 : ಮಕ್ಕಳ ಕಲ್ಯಾಣ ಸಮಿತಿಯವರು ಕಂದಾಯ ನಿರೀಕ್ಷಕರಿಗೆ ಕ್ರಮ ಕೈಗೊಳ್ಳುವಂತೆ ಬರೆದ ಪತ್ರ.
ನಿಪಿ- 10 : ಕಂದಾಯ ನಿರೀಕ್ಷಕರು ತಹಶೀಲ್ದಾರ್‌ರವರಿಗೆ ಕ್ರಮ ಕೈಗೊಳ್ಳುವಂತೆ ಬರೆದ ಪತ್ರ.
ನಿಪಿ- 11 : ಪ್ರಥಮ ವರ್ತಮಾನ ವರದಿ.
ನಿಪಿ- 12 : ಶಾಲಾ ದೃಢೀಕರಣ ಪತ್ರ.

**ಆರೋಪಿಗಳ ಪರ ವಿಚಾರಣೆಯಾದ ಸಾಕ್ಷಿಗಳ ಪಟ್ಟಿ:**

- ಯಾರೂ ಇಲ್ಲಾ –

**ಆರೋಪಿಗಳ ಪರ ಗುರುತಿಸಲ್ಪಟ್ಟ ದಾಖಲೆಗಳ ಪಟ್ಟಿ:**

- ಏನೂ ಇಲ್ಲಾ –

**ಪಿ.ಆರ್.ಸ್ವತ್ತಿನ ವಿವರ:**

- ಏನೂ ಇಲ್ಲಾ –

**(ಬಿ.ಕೇಶವಮೂರ್ತಿ)**
ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಕುಷ್ಟಗಿ